

“ಯೇ ಈಡಿಯಟ್ ಮಾಸ್ಕ್ ಹಾಕ್ಕೊಂಡು ಸೀನು.” ಒಂದಾದ ಮೇಲೊಂದು ಬರುತಿದ್ದ ಸೀನುಗಳನ್ನು ತಡೆಯಲಾಗದೆ ಒದ್ದಾಡುತ್ತಿದ್ದ ಮಾದೇಶನಿಗೆ ಎಲ್ಲೋ ದೂರದಲ್ಲಿ ಧ್ವನಿಯೊಂದನ್ನು ಕೇಳಿದ ಹಾಗಾಯಾಯಿತು ಅಷ್ಟೆ. ಐದಾರು ಸೀನುಗಳು ಬಂದ ಮೇಲೆ ನಿರಾಳವಾಯಿತವನಿಗೆ. ಅಬ್ಬಾ ಎಂದುಕೊಂಡು ಜೇಬಿನಿಂದ ಕರ್ಚೀಫ್ ತೆಗೆದು ಮುಖ ಒರೆಸಿಕೊಂಡ.

“ಯೇ ಲೋಫರ್ ಮಾಸ್ಕ್ ಹಾಕೋ ಮೊದಲು. ಊರಗೆಲ್ಲಾ ಕೊರೊನಾ ಹಂಚಬೇಡ.”

ಈ ಬಾರಿ ಧ್ವನಿ ಸ್ಪಷ್ಟವಾಗಿ ಕೇಳಿತವನಿಗೆ. ತಿರುಗಿ ನೋಡಿದ. ರಾತ್ರೀಯಿಡೀ ಡ್ಯೂಟಿ ಮಾಡಿ, ಬೆಳಗ್ಗೆ ಡಿವೈಎಸ್ಪಿ ಮನೆಗೆ ಹಾಲು ತಲುಪಿಸಿ, ಬೀಟಿನ ತನ್ನ ಸ್ಥಳಕ್ಕೆ ಹಿಂತಿರುಗಿದ್ದ. ಅರ್ಧ ಗಂಟೆಯೂ ಆಗಿರಲಿಲ್ಲ. ಮೊದಲೇ ಕಾಫಿಯಿಲ್ಲದೆ ಕಿರಿಕಿರಿಯಾಗುತ್ತಿತ್ತು. ಜೊತೆಗೆ ಈ ಸೀನಿನ ಗೋಜಲು ಬೇರೆ. ‘ಲೋಫರ್’ ಅಂದ ಧ್ವನಿ ಕಡೆಗೆ ಕೋಪದಿಂದ ತಿರುಗಿದ. ಅವಳನ್ನು ನೋಡಿದ ಕೂಡಲೆ, ಹಾಗೆಯೇ ನಿಂತುಬಿಟ್ಟ.

“ಯೇ... ರಾಸ್ಕಲ್. ಮಾಸ್ಕ್ ಹಾಕೊಳ್ಳೋ” ಅಂದವಳಿಗೆ, “ಆಯಿತು ಮೇಡಂ” ಅಂದ. “ಥೂ... ಬ್ರೂಟ್ಸ್” ಎನ್ನುತ್ತಾ ಅವಳು ಮುಂದೆ ಹೋದಳು.

ಅವಳು ಡಿವೈಎಸ್ಪಿ ರಾಜಪ್ಪನವರ ಮಗಳು. ಅಪ್ಪನ ಬೈಗುಳಗಳಿಗೆ ಇವಳೇ ಓನರ್ ಅಂತ ಅವನಿಗೆ ಅನೇಕ ಸಾರಿ ಅನ್ನಿಸಿತ್ತು. ಅವಕಾಶ ಸಿಕ್ಕಾಗಲೆಲ್ಲಾ ಬೈಗುಳಗಳ ಸುರಿಮಳೆ. ಅವರ ಅಪ್ಪ ಇರಲಿ ಬಿಡಲಿ.

ತಿಂಗಳ ಹಿಂದೆ ಈಗಿರುವ ಸ್ಟೇಷನ್‌ಗೆ ಪೋಸ್ಟಿಂಗ್ ಆಗಿ ಬಂದಾಗ ಮಾದೇಶ ಸ್ವಲ್ಪ ಬುದ್ಧಿ ಕಲಿತಿದ್ದ. ಒಂದೆರಡು ವರ್ಷಗಳ ಹಿಂದೆ ಆಗಿದ್ದರೆ, ಹೇಳಿದವಳ ಮುಖಕ್ಕೆ ನೇರವಾಗಿ ಹೇಳಿರುತ್ತಿದ್ದ. ಖಂಡಿತಾ ಬೈದು ಹೇಳಿರುತ್ತಿರಲಿಲ್ಲ. ಏಕೆಂದರೆ ಅವನಿಗೆ ಬೈಯುವುದು ಇಷ್ಟವಿಲ್ಲ. ಆದರೆ ಒಳ್ಳೆಯ ಮಾತುಗಳಲ್ಲೇ ತಿರುಗಿ ಮಾತನಾಡದೇ ಸುಮ್ಮನಿರುವುದು ಅವನಿಗೆ ಸಾಧ್ಯವೇ ಇರಲಿಲ್ಲ.

ಈಗಿರುವ ಸ್ಟೇಷನ್ ಪಕ್ಕದಲ್ಲೇ ಡಿವೈಎಸ್ಪಿ ಕಚೇರಿ ಕೂಡ ಇತ್ತು. ಡ್ಯೂಟಿ ರಿಪೋರ್ಟ್ ಮಾಡಿಕೊಂಡ ಮಾರನೇ ದಿನ ಡಿವೈಎಸ್ಪಿ ಕಚೇರಿಯಿಂದ ಅವನಿಗೆ ಬುಲಾವ್ ಬಂದಿತ್ತು.

“ಬಾರೋ ಇಲ್ಲಿ. ನಿನಗೆ ಇಂಗ್ಲೀಸ್ ಟೈಪಿಂಗ್ ಬರುತ್ತೇನೋ?” ಡಿವೈಎಸ್ಪಿ ಕೇಳಿದರು.

ಸೆಲ್ಯೂಟ್ ಹೊಡೆಯುವ ಮುನ್ನವೇ ಕೇಳಿದ ಪ್ರಶ್ನೆಗೆ “ಹೌದು ಸರ್” ಎಂದು ಸೆಲ್ಯೂಟ್ ಹೊಡೆದ ಮೇಲೆ ಹೇಳಿದ ಮಾದೇಶ ಅಟೆನ್ಷನ್‌ನಲ್ಲೇ ಇದ್ದ.

“ವಾಕೆ. ಇವತ್ತಿಂದ ನೀನು ಇಲ್ಲೇ ಇರು. ಆ ಎಸ್‌ಐಗೆ ಹೇಳಿದ್ದೀನಿ. ಆ ಪಕ್ಡ್ ಎಸ್‌ಪಿಗೆ ಎಲ್ಲಾ ಇಂಗ್ಲೀಸ್‌ನಲ್ಲೇ ಆಗಬೇಕು. ಸೂಳೆ ಮಗ. ದಿನರಾತ್ರಿ ತಲೆ ತಿಂತಾನೆ. ವಾಟ್ಸ್‌ಅಪ್ ಮೆಸೇಜ್ ನೋಡಿ. ತಕ್ಷಣ ರೆಸ್ಪಾಂಡ್ ಮಾಡಿ” ಅಂತ.

“ಸರಿ ಸರ್” ಎಂದು ಸೆಲ್ಯೂಟ್ ಹೊಡೆದು ಹೊರಬಂದ ಮಾದೇಶನಿಗೆ ‘ಪಕ್ಡ್’ ಅಂದ್ರೆ ಏನು? ಅಂತ ಯೋಚನೆ ಶುರುವಾಯಿತು. ಪಾಕ್ಡಾ ಅಂತನೂ ಅಲ್ಲ. ಪಕಡಾನೂ ಅಲ್ಲ.